**OS.188/2023** **PW – 1**

**ಪ್ರಮಾಣೀಕರಿಸಲಾದ ದಿನಾಂಕ : 10.12.2025.**

**<u>ಮುಂದುವರೆದ ವಾಟೀ ಸವಾಲು : ಪ್ರತಿವಾದಿ ಪರ ಶ್ರೀ. B.N.A ವಕೀಲರಿಂದ</u> :-**

1ನೇ ಪ್ರತಿವಾದಿ ಹಾಗೂ ಆತನ ಪತ್ನಿಯು ಹಿರಿಯ ನಾಗರೀಕರು ಎಂದರೆ ಸರಿ. ವಾದಪತ್ರಕ್ಕೆ ಸಂಪೂರ್ಣ ಮಾಹಿತಿಯನ್ನು ನಾನೇ ನಮ್ಮ ವಕೀಲರಿಗೆ ನೀಡಿ ಬರೆಸಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸುವುದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಪಿ-1 ರಿಂದ 4 ನ್ನು ಹೊರತುಪಡಿಸಿ ಬೇರೆ ಯಾವ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ನೀಡಿರುವಂತಹ ದಾಖಲಾತಿಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯು ನಿಮಗೆ ಹಾಗೂ ನಿಮ್ಮ ಮಗಳಿಗೆ ಬರ ಬೇಕಾದಂತಹ ಆಸ್ತಿಗಳಲ್ಲಿ ಭಾಗಾಂಶ ನೀಡಲು ಸಿದ್ಧರಿದ್ದರು, 1ನೇ ಪ್ರತಿವಾದಿ ಹಾಗೂ ಅವರ ಪತ್ನಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಹೂಡಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯು ಹೃದ್ರೋಗಿಯಾಗಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿ ಹಾಗೂ ಅವರ ಪತ್ನಿಯು ವಯಸ್ಸಾಗಿರುವ ಕಾರಣ ಅವರನ್ನು ನೋಡಿಕೊಳ್ಳಲು ಆಗದೇ ನೀವೆ ಮನೆಯನ್ನು ಬಿಟ್ಟು ಹೋಗಿ ಈ ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿಯಲ್ಲ. ನೀವಾಗಿಯೇ ಮನೆಯನ್ನು ಬಿಟ್ಟು ಹೋಗಿರುವ ಕಾರಣ ದಾವಾ ಆಸ್ತಿಗಳಲ್ಲಿ ಯಾವುದೇ ಭಾಗಾಂಶವನ್ನು ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ : ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**
**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**